ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 24.04.2024.

**ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಎಸ್.ಎಸ್.ಸಿ. ವಕೀಲರಿಂದ:**

ನನ್ನ ಮದುವೆಕ್ಕಿಂತ ಪೂರ್ವದಲ್ಲಿ ನನ್ನ ಗಂಡ ಮನೆ ಮತ್ತು ತವರು ಮನೆ ಸಂಬಂಧ ಆಗಲೇ ಇತ್ತು ಎಂದರೆ ಸರಿ. ನನ್ನ ಅತ್ತೆ ಗಂಗಮ್ಮ ರವರು ನನ್ನ ತಂದೆಗೆ ಸಹೋದರ ಅತ್ತೆಯಾಗಬೇಕು. ನಮ್ಮ ಕುಟುಂಬದಲ್ಲಿ ಬೇರೆ ಯಾವುದೇ ನೌಕರಿ ವಗರೆ ಆಧಾಯ ಇರುವುದಿಲ್ಲ, ಒಕ್ಕಲುತನ ಮಾತ್ರ ಇರುತ್ತದೆ ಎಂದರೆ ಸರಿ. ನನ್ನ ಗಂಡ ಕಾಣೆಯಾದ ಬಗ್ಗೆ ನಾನು ಯಾವುದೇ ರೀತಿ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿಲ್ಲ. ಅದೇ ರೀತಿ ಪತ್ರಿಕೆಗಳಲ್ಲಿ ಜಾಹಿರು ನೋಟೀಸ್ ಕೊಟ್ಟಿರುವುದಿಲ್ಲ. ನಾನು ಮುಂಬೈ ಮತ್ತು ಪುನೆಯಲ್ಲಿ ನನ್ನ ಗಂಡನನ್ನು ಹುಡುಕಿರುತ್ತೇನೆ, ಆದರೆ ಅವುಗಳ ಬಗ್ಗೆ ದಾಖಲೆ ಇರುವುದಿಲ್ಲ. ಅಂದರೆ ನನ್ನ ಗಂಡ ಇವತ್ತಿನವರೆಗೂ ಜೀವಂತ ಇದ್ದಾನೆ ಎಂದರೆ, ಸಾಕ್ಷಿ ಇರುವ ಸಂಭವ ಇರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ಮತ್ತು ನನ್ನ ಗಂಡನ ಕೊನೆಯ ಬೇಟಿ ನಾನು ಯಾವಾಗ ತವರು ಮನೆಗೆ ಬಂದೇನೋ ಆವಾಗ ಮಾತ್ರ ಕೊನೆಯಾದಾಗಿ ನೋಡಿರುತ್ತೇನೆ. ನಾನು ಮಾಂಗಲ್ಯವನ್ನು ಹಾಕಿಕೊಂಡಿರುತ್ತೇನೆ, ಏಕೆಂದರೆ ನನ್ನ ತಂದೆ-ತಾಯಿ ತೆಗೆಯಬೇಡ ಎಂದು ಹೇಳಿರುತ್ತಾರೆ ಆ ಕಾರಣ ನಾನು ಹಾಕಿಕೊಂಡಿರುತ್ತೇನೆ. ಸಾಮಾನ್ಯವಾಗಿ ಗಂಡ ಜೀವಂತ ಇದ್ದರೆ ಮಾತ್ರ ತಾಳಿ ಕಟ್ಟಿಕೊಳ್ಳುತ್ತಾರೆ ಎಂದರೆ ಸರಿ. ನನ್ನ ಗಂಡ ಇವತ್ತಿನವರೆಗೂ ಜೀವಂತ ಇದ್ದು, ಆತ ಕೇಸ್ ಮಾಡಲು ಬಾ ಎಂದರೆ ಬರುವುದಿಲ್ಲ ಎಂದು ಹೇಳಿದ್ದರಿಂದ ನಾನು ಈ ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಗಂಡ ಜೀವಂತ ಇರುವ ಕಾಲಕ್ಕೆ ನನಗೆ ಈ ದಾವೆ ಮಾಡಲು ಯಾವುದೇ ಅರ್ಹತೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತ್ರಾಸ್ ಕೊಡಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ನನ್ನ ಗಂಡ ನನ್ನನ್ನು ಬೇಟಿಯಾಗುತ್ತಾನೆ ಹಾಗೂ ಆತ ಜೀವಂತ ಇರುತ್ತಾನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**